ಅಂದಿದ್ದರು.

ಇನ್ನೊಮ್ಮೆ ಫೋನ್ ಮಾಡಿದಾಗ ಬಹಳ ಖುಷಿಯಲ್ಲಿಇದ್ದರು. ಕೇರಳ ರಾಜ್ಯ ಲಾಟರಿ ಟಿಕೆಟ್ಟುಗಳನ್ನು ಮಾರುತ್ತಿದ್ದೇನೆ ಅಂದಿದ್ದರು. ತಿರು ಓಣಂ ಬಂಪರ್ ಲಾಟರಿ ಮೊದಲ ಬಹುಮಾನ ಇಪ್ಪತ್ತೈದು ಕೋಟಿ. ಮಾರದೇ ಉಳಿದ ಟಿಕೆಟ್ಟುಗಳನ್ನು ಅವರೇ ಕೊಂಡು ಕೊಳ್ಳುತ್ತಿದ್ದರು.

'ನಿಮಗೆ ಫೋನ್ ಮಾಡಿದ್ದು ಒಂದು ವಿಷಯ ಕೇಳಲು' ಕೊನೆಯ ಬಾರಿ ಅವರು ಅಂದಿದ್ದರು.

'ನಿಮಗೆ ದೇಶದ ರಾಷ್ಟ್ರಪತಿಗಳ ಹತ್ತಿರದವರು ಯಾರಾದರೂ ಗೊತ್ತಾ' ಕೇಳಿದ್ದರು 'ಈ ಸಲದ ತಿರು ಓಣಂ ಬಂಪರ್ ಲಾಟರಿ ಮೊದಲ ಬಹುಮಾನ ಇಪ್ಪತ್ತೈದು ಕೋಟಿ ನನಗೇ ಹೊಡೆಯುತ್ತದೆ. ಜೊತೆಗೆ ಮಾರಾಟಗಾರನ ಕಮಿಷನ್ನೂ ನನಗೇ ಸಿಗುತ್ತದೆ. ಬಳ್ಳೆ ಹಾಡಿಯಲ್ಲಿ ಒಂದು ಸಮತಟ್ಟಾದ ಜಾಗ ನೋಡಿಟ್ಟಿರಿ. ಆದಿವಾಸಿಗಳಿಗೆ ಒಂದು ನೂರು ಮನೆಗಳಾದರೂ ಕಟ್ಟಬೇಕು. ಅದರ ಉದ್ಘಾಟನೆಗೆ ದೇಶದ ಮಾನ್ಯ ರಾಷ್ಟ್ರಪತಿಗಳನ್ನುಆಹ್ವಾನಿಸಬೇಕು' ಮಲಯಾಳಿ ಮಾದೇವಣ್ಣ ಮಾತನಾಡುತ್ತಲೇ ಇದ್ದರು.

'ಆದಿವಾಸಿಗಳ ಮನೆಗಳ ನಡುವೆ ಒಂದು ಆಶ್ರಮ. ಅದರ ಒಳಗೆ ಸ್ವಾಮಿ ನಾರಾಯಣ ಗುರುಗಳ ದೇವಸ್ಥಾನ. ಆದರೆ ನಾನು ಮಾತ್ರ ಅಲ್ಲಿ ಬರುವುದಿಲ್ಲ. ನನ್ನ ದೇಹವೂ ಬರುವುದಿಲ್ಲ. ಅದನ್ನು ಇಲ್ಲಿ ತಿರುವನಂತಪುರದ ಮೆಡಿಕಲ್ ಕಾಲೇಜಿಗೆ ಬರೆದುಕೊಟ್ಟಿರುವೆ'.

ಅದೇ ಅವರ ಕೊನೆಯ ಮಾತು.

* * *

ಬೈಕು ನಿಲ್ಲಿಸಿ ಮನೆಯೊಳಗೆ ಬಂದೆ. ಷೂ ಬಿಚ್ಚಲು ಮರೆತಿದ್ದೆ. 'ಮೂದೇವಿ ಮುಂಡೇದೇ ಮೊದಲು ಷೂ ಬಿಚ್ಚು' ಸಾಕುಂತಲೆ ಕೂಗಿದಳು. ಹಿಂತಿರುಗಿ ಹೋಗಿ ಷೂ ಬಿಚ್ಚಿ ಮತ್ತೆ ಮನೆಯೊಳಗೆ ಬಂದೆ. 'ಹೆಲ್ಮೆಟ್ ತೆಗ್ಯೋ ಮುಂಡೇದೇ' ಅವಳು ಮತ್ತೆ ಅರಚಿದಳು.



'ಮಳೆಗಾಲವು ಕಳೆದು, ಕಪ್ಪಗಿನ ಮೋಡಗಳು ಬಿಳುಪಾಗಿ, ಹಗಲು ಆಗಸದಲ್ಲಿ ದಿನಮಣಿ ಸೂರ್ಯನ ಬೆಳಕು ಬೆಳಗಿ, ಇರುಳ ಆಗಸದಲ್ಲಿ ಚಂದಿರನ ಹೊಳಪು ಮಿನುಗಿ, ಉಕ್ಕಿದ್ದ ನದಿಗಳು ಶಾಂತವಾಗಿ, ಆಕಾಶ ಮಾರ್ಗದಲ್ಲಿ ಹಂಸಗಳು ಹಾರಿ ಬಂದು, ಕೊಳದಲ್ಲಿ ತಾವರೆಗಳು ಅರಳಿ, ತಲೆಯ ಮೇಲೆ ಅರಳೆಹತ್ತಿ ಗಳಂತಹ ತೆಳು ಮೋಡಗಳು ತೇಲಿ, ಮೈಸೂರಿನ ಮಹಾರಾಜರು ಯುದ್ಧಕ್ಕೆ ಹೋಗಿದ್ದವರು ಶಹರಿಗೆ ಮರಳಿ ವಿಜಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸಿದ್ಧರಾಗುತ್ತಿದ್ದ ಕಾಲ.'

ಹೈಸ್ಕೂಲಿನ ಟೀಚರ್ ಸೌಭಾಗ್ಯಲಕ್ಷ್ಮಿ ಮೇಡಂ ಷಟ್ಪದಿ ಸಾಲುಗಳು ಮೂಗಿನ ತುದಿಯಲ್ಲಿ. ಕಳಚಿದ್ದ ಶೂಗಳನ್ನು ಮತ್ತೆ ಹಾಕಿಕೊಂಡು ಅದೇ ಹಳೆಯ ಡೀಸೆಲ್ ಬುಲ್ಲೆಟ್ ಬೈಕು ಹತ್ತಿ ನಗರ ಸಂಚಾರಕ್ಕೆ ಹೊರಟೆ.

* * *

'ಬಾರೋ ರಾಜಕುಮಾರ. ಅನುಭವಿಸು ಶೂರಾ...'

ಕಂಸಾಳೆಯ ಮೇಷ್ಟರು ಜಾಲರಿಯ ಕಿಟಕಿಗಳಿಗೆ ಹಲ್ಲಿಯಂತೆ ಅಂಟಿಹೋಗಿದ್ದ ನನ್ನನ್ನು ಎರಡೂ ಕೈಗಳಿಂದ ಕಿತ್ತು ಬಿಡಿಸಿ ಒಳಗೆ ಕರೆದೊಯ್ದಿದ್ದರು. ಕಮಟು ಪರಿಮಳದ ಮಂಚದಲ್ಲಿ ಮೇಡಂ ಪಕ್ಕದಲ್ಲಿ ಕುಳ್ಳಿರಿಸಿ ಕಂದನನ್ನು ಮಜ್ಜನಕ್ಕೆ ಸಿದ್ಧಗೊಳಿಸುವ ತಂದೆಯಂತೆ ನನ್ನ ಅಂಗಿ ಚಣ್ಣಗಳನ್ನು ಬಿಚ್ಚಿ ಬಿಸುಟಿದ್ದರು.

'ಅನುಭವಿಸು ಕಂದಾ. ಆದರೆ ಯಾರಿಗಾದರೂ ಹೇಳಿ ಮಾನ ಕಳೆಯಬೇಡವೋ ರಾಜಕುಮಾರಾ' ಎಂದು ಕೈಮುಗಿದಿದ್ದರು.

ಅಂಗಿ ಚಡ್ಡಿ ತೊಟ್ಟು ಹೊರಟವನಿಗೆ ಸೌಭಾಗ್ಯಲಕ್ಷ್ಮಿ ಮೇಡಂ, 'ನೀನು ಸಾಯುವ ತನಕ ಒಂಟಿ ಪಿಶಾಚಿಯಾಗಿ ನೂರು ವರ್ಷ ಬದುಕಿರುತ್ತೀಯಾ' ಎಂದು ಶಪಿಸಿದ್ದರು.

ಹಗಲು ನಿದ್ದೆಯಲ್ಲೇ ಸುಮ್ಮನೇ ಬೈಕು ಓಡಿಸುತ್ತಿದ್ದೆ. ಬಹುಶಃ ಪರಿಚಿತ ಗಲ್ಲಿಯೇ ಇರಬೇಕು. ಸುರಿಯುತ್ತಿರುವ ಮಳೆ. ಸಾಲುಸಾಲಾಗಿ ಎದುರಿಂದ ಶಾಲಾ ಮಕ್ಕಳು ಮಳೆಯಲ್ಲಿ ಕೇಕೆಹಾಕುತ್ತಾ ನಡೆದು ಹೋಗುತ್ತಿದ್ದರು. ●